ಶ್ರೀ ಎಂ. ಕೃಷ್ಣಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಯೋಜನೆಯ ಅನುಷ್ಠಾನವಾಗುತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದರು. ಯಾವ ಅಧಿಕಾರಿಗಳು ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿಲ್ಲ ಅವರ ಹೆಸರನ್ನು ಸರ್ಕಾರದ ಗಮನಕ್ಕೆ ತಂದರೂ ಅವರನ್ನು ರಕ್ಷಣೆ ಮಾಡುವ ಕೆಲಸವನ್ನು ಈ ಸರ್ಕಾರ ಮಾಡಿದ್ದರೆ ಪ್ರತಿಫಲ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಅಧ್ಯಕ್ಷರು:– ಈ ಪ್ರಶ್ನೆಗೆ ಅದು ಬರುವುದಿಲ್ಲ. ಈಗ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ ರವರ ಪ್ರಶ್ನೆ.

ಬೀದರ್‌ನಲ್ಲಿ ವಿಮಾನ ನಿಲ್ದಾಣ ಪ್ರಾರಂಭಿಸುವ ಬಗ್ಗೆ

109(1466); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಬೀದರ್‌ನಲ್ಲಿ ವಾಯುಸೇನೆಗೆ ಸೇರಿದ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕ ವಿಮಾನಯಾನ ಸೇವೆಯನ್ನು ಕಲ್ಪಿಸಲು ರಾಜ್ಯ ಸರ್ಕಾರದಿಂದ ಟರ್ಮಿನಲ್ ಕಟ್ಟಡವನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕಾಗಿ ಇಲ್ಲಿಯವರೆವಿಗೆ ವೆಚ್ಚ ಮಾಡಲಾಗಿರುವ ಹಣವೆಷ್ಟು;

ಆ) ಟರ್ಮಿನಲ್ ನಿರ್ಮಿಸಿ ವರ್ಷಗಳೇ ಕಳೆದಿದ್ದರೂ ಇಲ್ಲಿಂದ ವಿಮಾನ ಸಂಚಾರವನ್ನು ಪ್ರಾರಂಭಿಸದೇ ಇರಲು ಕಾರಣಗಳೇನು;

ಇ) ಈ ಸಂಬಂಧವಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ತೀರುವಳಿಯನ್ನು (ಕ್ಲಿಯರೆನ್ಸ್) ಕೋರಿ ಯಾವಾಗ ಪ್ರಸ್ತಾವನೆ ಸಲ್ಲಿಸಲಾಗಿದೆ; ಇದುವರೆವಿಗೆ ಈ ಸಂಬಂಧವಾಗಿ ಎಷ್ಟು ಬಾರಿ ಪ್ರಾಧಿಕಾರದ ಜೊತೆ ಪತ್ರ ವ್ಯವಹಾರವನ್ನು ನಡೆಸಲಾಗಿದೆ;

ಈ) ವಿಮಾನ ನಿಲ್ದಾಣ ಪ್ರಾರಂಭ ಮಾಡುವ ಕೆಲಸವನ್ನು ತ್ವರಿತವಾಗಿ ಪ್ರಾರಂಭಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದೆಯೇ?

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು.)

ಅ) ಬಂದಿದೆ. ಬೀದರ್‌ನಲ್ಲಿ ವಾಯು ಸೇನೆಯ ವಿಮಾನ ನಿಲ್ದಾಣದಲ್ಲಿ ನಾಗರೀಕ ವಿಮಾನ ಯಾನ ಸೇವೆಯನ್ನು ಪ್ರಾರಂಭಿಸಲು ಹೊಸ ಟರ್ಮಿನಲ್ ಕಟ್ಟಡವನ್ನು ರಾಜ್ಯ ಸರ್ಕಾರವು ₹ 3,53,55,266/-ಗಳ ವೆಚ್ಚದಲ್ಲಿ ನಿರ್ಮಾಣ ಮಾಡಿರುತ್ತದೆ.

ಆ) ಬೀದರ್ ವಿಮಾನ ನಿಲ್ದಾಣವು ನಾಗರೀಕ ವಿಮಾನಯಾನ ಸೇವೆ ಪ್ರಾರಂಭಿಸಲು ಯೋಗ್ಯವಾಗಿದ್ದು ಇದು ಹೈದರಾಬಾದ್ ವಿಮಾನ ನಿಲ್ದಾಣದಿಂದ 150 ಕಿ.ಮೀ. ವ್ಯಪ್ತಿ ಪ್ರದೇಶದೊಳಗೆ ಬರುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರವು ಹೈದರಾವಾದ್ ವಿಮಾನ ನಿಲ್ದಾಣದ ಪ್ರಾಧಿಕಾರ ಜಿ.ಎಂ.ಆರ್. ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಹಿನ್ನೆಲೆಯಲ್ಲಿ ಇದರ ಕಾರ್ಯಾಚರಣೆಗೆ ಜಿ.ಎಂ.ಆರ್ ಸಂಸ್ಥೆಯು ನಿರಾಪೇಕ್ಷಣಾ ಪತ್ರ ನೀಡಿಲ್ಲವಾದ್ದರಿಂದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಅನುಮೋದನೆಯನ್ನು ನೀಡಿರುವುದಿಲ್ಲ.

ಇ) ಮತ್ತು ಈ) ಈ ಸಂಬಂಧ ರಾಜ್ಯ ಸರ್ಕಾರವು ದಿನಾಂಕ:03.03.2008ರಲ್ಲಿ, 19.05.2009 ಮತ್ತು 27.01.2011ರಲ್ಲಿ ಕೇಂದ್ರ ನಾಗರೀಕ ವಿಮಾನ ಯಾನ ಮಂತ್ರಾಲಯಕ್ಕೆ ಪತ್ರ ಬರೆದು ಬೀದರ್ ವಿಮಾನ ನಿಲ್ದಾಣ ಕಾರ್ಯರಂಭ ಮಾಡಲು ಅನುಮತಿ ಕೋರಿತ್ತು. ಈ ಸಂಬಂಧ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳು, ಜಿ.ಎಂ.ಆರ್. ಸಂಸ್ಥೆ ಅಧಿಕಾರಿಗಳು ರಾಜ್ಯ ಸರ್ಕಾರದ ಪ್ರತಿನಿಧಿಗಳೊಂದಿಗೆ ವಿಮಾನ ನಿಲ್ದಾಣದ ಜಂಟಿ ಪರಿವೀಕ್ಷಣೆ ಕಾರ್ಯವನ್ನು ದಿನಾಂಕ:19-11-2012ರಂದು ಕೈಗೊಂಡಿದ್ದು, ಸದರಿ ತಂಡವು ಬೀದರ್ ವಿಮಾನ ನಿಲ್ದಾಣದಲ್ಲಿ ನಾಗರೀಕ ವಿಮಾನಯಾನ ಸೇವೆಯನ್ನು ಪ್ರಾರಂಭಿಸುವ ಸಲುವಾಗಿ

ಮೂಲಸೌಕರ್ಯದ ಅವಶ್ಯಕತೆಯನ್ನು ಪರಿಗಣಿಸಿರುತ್ತದೆ. ಮುಂದುವರೆದು ದಿನಾಂಕ:04–07–2013 ರಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಜಿಎಂಆರ್ ಸಂಸ್ಥೆಯವರು ಒಂದು ತಿಂಗಳ ಒಳಗಾಗಿ ತಮ್ಮ ಅಭಿಪ್ರಾಯ ತಿಳಿಸುವಂತೆ ಸೂಚಿಸಲಾಗಿತ್ತು. ಅದರಂತೆ ರಾಜ್ಯ ಸರ್ಕಾರವು ದಿನಾಂಕ:17–08–2013ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಜಿಎಂಆರ್ ಹೈದರಾಬಾದ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಇವರಿಗೆ ಪತ್ರ ಬರೆದಿದ್ದು ದಿನಾಂಕ:25.01.2014ರಂದು ನೆನಪೋಲೆ ಪತ್ರವನ್ನೂ ಸಹ ಬರೆಯಲಾಗಿದ್ದು, ಉತ್ತರವನ್ನು ನಿರೀಕ್ಷಿಸಿದೆ.

ಬೀದರ್‌ನಲ್ಲಿ ನಾಗರೀಕ ವಿಮಾನ ಯಾವ ಸೇವೆ ಪ್ರಾರಂಭಿಸಲು ರಾಜ್ಯ ಸರ್ಕಾರವು ಕೇಂದ್ರ ವಿಮಾನಯಾನ ಮಂತ್ರಾಲಯದೊಂದಿಗೆ ಸತತ ಸಂಪರ್ಕದಲ್ಲಿರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:– ಮಾನ್ಯ ಅಧ್ಯಕ್ಷರೆ, ಮೂಲಭೂತ ಸೌಕರ್ಯ, ಸುಮಾರು ಎಷ್ಟೊ ವರ್ಷಗಳಾಯಿತು, ಅಲ್ಲೆಲ್ಲಾ ಮೂಲಭೂತ ಸೌಕರ್ಯ Terminal ತಯಾರು ಆಗಿ ಎಲ್ಲಾ ಆಗಿ, ಆದರೆ ಇವತ್ತಿನವರೆಗೆ ಯಾವುದೇ flight ನೋಡಿಲ್ಲ. ನಾವು ನೋಡಿಕೊಂಡು ಬರುತ್ತಿದ್ದೇವೆ. ಖಾಲಿ ಚೆನ್ನಾಗಿದೆ. ಲಕ್ಷಣವಾಗಿದೆ, ಚೆನ್ನಾಗಿ ಕಟ್ಟಿದ್ದಾರೆ. ಎಲ್ಲಾ ಸೌಕರ್ಯವೂ ಇದೆ. ಒಂದೂ flight ಇವತ್ತಿನವರೆಗೆ ಬಂದಿಲ್ಲ. ಬರುವ ಲಕ್ಷಣಗಳೂ ಕಾಣುತ್ತಿಲ್ಲ. ಆದುದರಿಂದ flight ಬರುವುದಕ್ಕೆ ತಾವೇನಾದರೂ ಪ್ರಯತ್ನ ಮಾಡುತ್ತೀರಾ? ಒಂದು ವೇಳೆ GMR ಗೆ ನೀನೇ ಹಾಕು ಎಂದರೆ ಅವರು ಹಾಕಲು ತಯಾರಿದ್ದಾರೆ. ನೀವೇ ಬೀದರ್‌ಗೆ ಬರುತ್ತೀರಿ, ಎಷ್ಟು ಕಷ್ಟವಾಗುತ್ತದೆ ಎಂಬುದು ನಿಮಗೆ ಗೊತ್ತಿದೆಯಲ್ಲ. ನಿಮಗೂ ಅನುಕೂಲವಾಗುತ್ತದೆ, ಮುಖ್ಯಮಂತ್ರಿಗಳಿಗೂ ಅನುಕೂಲವಾಗುತ್ತದೆ. ಎಲ್ಲರಿಗೂ ಅನುಕೂಲವಾಗುತ್ತದೆ. ನೀವು ಏಕೆ ಅದರ ಬಗ್ಗೆ ಪ್ರಯತ್ನ ಮಾಡುವುದಿಲ್ಲ. ಮೇಲಿನ ಸರ್ಕಾರ,

ಕೆಳಗಿನ ಸರ್ಕಾರ ನಿಮ್ಮದೆ. ತಾವು ಮನಸ್ಸು ಮಾಡಿದರೆ ಆಗುತ್ತದೆ. ಆದರೆ, ಮನಸ್ಸು ಮಾಡುತ್ತಿಲ್ಲ. ಈಗ ರೋಷನ್ ಬೇಗ್ ರವರು ಬಂದಿದ್ದಾರೆ. ಶಕ್ತರಿದ್ದಾರೆ. ಕೆಲಸ ಮಾಡಿ ಎಂದು ಹೇಳುತ್ತಿದ್ದೇವೆ. ಕೆಲಸ ಮಾಡಿ.

ಶ್ರೀ ಆರ್.ರೋಷನ್ ಬೇಗ್:– ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಬಹಳ ವಿವರವಾದ ಮಾಹಿತಿಯನ್ನು ಕೊಡಲಾಗಿದೆ. ನಾವು ಇಷ್ಟು ಹಣ ಖರ್ಚು ಮಾಡಿ ಕಟ್ಟಡ ಕಟ್ಟಿದ್ದೇವೆ, ಟರ್ಮಿನಲ್ ಕಟ್ಟಿದ್ದೇವೆ, Airport authority of India ಜೊತೆ ಮೀಟಿಂಗ್ ಮಾಡಿದ್ದೇವೆ. ನಾವು ಒಂದು ಸಾರಿ Director of civil Aviation, Ministry of Civil Aviation, Airport authority of India ಇವರ ಜೊತೆಯಲೆಲ್ಲಾ ಮಾತನಾಡಿದ್ದೇವೆ ಅವರು ಒಪ್ಪಿಕೊಂಡಿದ್ದಾರೆ. ಏನೆಂದರೆ, GMR and Airport authority of India Agreement ಪ್ರಕಾರ within 150 Km radius ನಲ್ಲಿ ಯಾವುದೇ flight operate ಮಾಡಬಾರದೆಂದು ಅವರು ಹೇಳಿದ್ದಾರೆ, ಅದಕ್ಕೆ ಜಿಎಂಆರ್ ಅವರು no objection certificate ಕೊಡಬೇಕು. ಈಗ ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ದೆಹಲಿಗೆ ಹೋದಾಗ ಇಲ್ಲವೇ ಜಿಎಂಆರ್ ಅವರನ್ನು ಇಲ್ಲೇ ಕರೆದು, ನೀವೇನು ತಮ್ಮ ಸಲಹೆಯನ್ನು ಕೊಟ್ಟಿದ್ದೀರಿ, ನಾವು ಸರ್ಕಾರದವರು ಜಿಎಂಆರ್ ಅವರಿಗೆ ಸರಿ ಅಬ್ಜಕ್ಷನ್ ಬೇಡ, ನೀವೇ ಆಪರೇಟ್ ಮಾಡಿ ಎಂದು ಹೇಳಬೇಕೆಂದಿದ್ದೇವೆ.

ಡಾ॥ ಗುರುಪಾದಪ್ಪ ನಾಗಮಾರಪಳ್ಳಿ:– ಮೂರುವರೆ ಕೋಟಿ ಖರ್ಚು ಮಾಡಿ ವರ್ಷಾನುಗಟ್ಟಲೆ ಆಯಿತು.

ಶ್ರೀ ಆರ್. ರೋಷನ್ ಬೇಗ್:– ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ಬನ್ನಿ.